

# ಹೊಸ ರೂಪದ ‘ಮಾಯಾಮೃಗ’

‘ಮಾಯಾಮೃಗ’ ಎಂದ ಕೂಡಲೇ ನಮಗೆ ನೆನಪಾಗುವುದು ಟಿ.ಎನ್. ಸೀತಾರಾಮ್ ನಿರ್ದೇಶನದ ಧಾರಾವಾಹಿ. ಆದರೆ ಇದು ಆ ಕಿರುತೆರೆಯ ಮಾಯಾಮೃಗವಲ್ಲ. ರಾಮಾಯಣದಲ್ಲಿ ರಾವಣನ ಸಂಹಾರಕ್ಕೆ ಕಾರಣವಾದ ಮಾಯಾಮೃಗದ ಘಟನೆ ಗೊತ್ತಿದೆಯಲ್ಲ, ಆ ಕಥೆಯನ್ನೇ ಇಂದಿನ ಕಾಲಕ್ಕೆ ಹೊಂದಿಸಿ ಬರೆದಿರುವ ಹೊಸ ಮಾಯಾಮೃಗ. ಈ ಮಾಯಾಮೃಗವನ್ನು ತೆರೆಯ ಮೇಲೆ ಹಿಡಿಯಲು ಹೊರಟಿರುವವರು ಯತಿರಾಜ್.

ಪತ್ರಕರ್ತನಾಗಿ, ನಟನಾಗಿ ಪರಿಚಿತರಾಗಿದ್ದ ಯತಿರಾಜ್ ಈ ಸಿನಿಮಾವನ್ನು ನಿರ್ದೇಶಿಸುತ್ತಿರುವುದಲ್ಲದೆ ನಾಯಕನಾಗಿ ನಟಿಸುತ್ತಿದ್ದಾರೆ ಕೂಡ. ಸಾಕಷ್ಟು ವಯಸ್ಸಿನ ಅಂತರ ಇರುವ ಇಬ್ಬರ ನಡುವೆ ಪ್ರೇಮ ಹುಟ್ಟಿಕೊಂಡರೆ ಏನಾಗುತ್ತದೆ ಎಂಬುದೇ ಚಿತ್ರದ ಕಥಾಹಂದರವಂತೆ. ಇನ್ನೇನು ಚಿತ್ರೀಕರಣ ಆರಂಭಿಸುವ ಸಿದ್ಧತೆಯನ್ನು ಚಿತ್ರತಂಡ ಮಾಡಿಕೊಂಡಿದೆ.

ಸೋನು ಸಾಗರ್ ಈ ಚಿತ್ರದ ನಾಯಕಿ. ಅರವಿಂದ್ ರಾವ್, ವಿ.ಸಿ.ಎನ್. ಮಂಜು ಕೂಡ ತಾರಾಗಣದಲ್ಲಿದ್ದಾರೆ. ವಿನು ಮನಸು ಸಂಗೀತ ಚಿತ್ರಕ್ಕಿದೆ. ■



# ಮತ್ತೊಮ್ಮೆ ರಾಕಿ ಭಾಯ್ ಹವಾ!

‘ಕೆ.ಜಿ.ಎಫ್!’ ಸಿನಿಮಾದ ಎರಡನೇ ಭಾಗ ಏ. 14ರಂದು ತೆರೆಕಾಣುತ್ತಿದೆ. ಮೊದಲ ಭಾಗದ ಗೆಲುವಿನಿಂದ ಹುಟ್ಟಿಕೊಂಡಿರುವ ನಿರೀಕ್ಷೆಯ ಭಾರವನ್ನೂ ಹೆಗಲ ಮೇಲೆ ಹೊತ್ತುಕೊಂಡು ನಡೆಯುತ್ತಿರುವ ರಾಕಿ ಭಾಯ್‌ಗೆ ಜನರು ಸಲಾಂ ಹೇಳುವರೇ?

ಕನ್ನಡ ಸಿನಿಮಾಗಳು ಹಲವು ಭಾಷೆಗಳಲ್ಲಿ ತಯಾರಾಗುವುದು ಮತ್ತು ಬಿಡುಗಡೆಯಾಗುವುದು ಹೊಸ ವಿಷಯವೇನಲ್ಲ. ಆದರೆ ಹಾಗೆ ಬಿಡುಗಡೆಯಾದ ಸಿನಿಮಾಗಳಲ್ಲಿ ಕನ್ನಡದ ಗಡಿಯಾಚೆ ಗೆಲುವು ದಾಖಲಿಸಿರುವ ಸಿನಿಮಾಗಳು ವಿರಳಾತಿವಿರಳ. ಆದರೆ ಇದಕ್ಕೆ ಪೂರ್ತಿ ಅಪವಾದದಂತಿರುವುದು ಹೊಂಬಾಳೆ ಫಿಲ್ಮ್ಸ್ ನಿರ್ಮಾಣದ, ಪ್ರಶಾಂತ್ ನೀಲ್ ನಿರ್ದೇಶನದ ‘ಕೆ.ಜಿ.ಎಫ್’. ಕನ್ನಡದಾಚೆ ತೆಲುಗು, ತಮಿಳುಗಳಲ್ಲಿ ಬಿಡಿ, ಹಿಂದಿ ಚಿತ್ರರಂಗದಲ್ಲಿ ‘ಕೆ.ಜಿ.ಎಫ್’ ಅಕ್ಷರಶಃ ದೂಳು ಎಬ್ಬಿಸಿತ್ತು. ಅಷ್ಟೇ ಅಲ್ಲ, ‘ಚಿನ್ನದ ಬೆಳೆ’ಯನ್ನೂ ತೆಗೆದಿತ್ತು. ಕನ್ನಡದ ಸಿನಿಮಾವೊಂದು ಅಷ್ಟೊಂದು ಭಾಷೆಯಲ್ಲಿ ನಿರ್ಮಾಣಗೊಂಡು ಅಷ್ಟು ದೊಡ್ಡ ಪ್ರಮಾಣದ ಗೆಲುವು ದಾಖಲಿಸಿದ್ದು ಇದೇ ಮೊದಲು. ಮಾಸ್ ಪ್ರೇಕ್ಷಕರಿಗೆ ಇಷ್ಟವಾಗುವ ಅದ್ದೂರಿ ಮೇಕಿಂಗ್, ಅಂಡರ್‌ವರ್ಲ್ಡ್ ಕಥೆ, ನಾಯಕನನ್ನು ವೈಭವೀಕರಿಸುವ ಬಿಲ್ಡಪ್‌ಗಳು ಎಲ್ಲವೂ ಚಿತ್ರದೊಳಗಿನ ಸಂಗತಿಗಳಾದರೆ, ಶಿಸ್ತುಬದ್ಧವಾಗಿ ನಡೆಸಿದ ಪ್ರಚಾರ, ಎಲ್ಲ ಚಿತ್ರರಂಗದಲ್ಲಿಯೂ ಆಯಕಟ್ಟಿನವರನ್ನು ಸಂಪರ್ಕಿಸಿ